ರಾಧಾನೇ ಏಪ್ರಿಲ್ಲಿನ ಮುಹೂರ್ತವೇ ಸರಿ ಎಂದಳು. ಕಂಡವರಿಗೆ ಹಾಗೂ ತಿಳಿದವರಿಗೆ, ರಾಧಾ ಅವಸರದಲ್ಲಿ ದುಡುಕಿನ ನಿರ್ಧಾರ ತಗೊಂಡಳು ಎನ್ನಿಸುವುದು ಬೇಡ ಎಂದಳು. ನಮಗೂ ಸರಿ ಕಂಡಿತು' ಎಂದ.

ಶಂಕ್ರಣ್ಣ ಏನೂ ಹೇಳಲರಿಯದೆ, 'ಜೀವನ ಎನ್ನುವುದು ಮಕ್ಕಳಾಟವೇ ಆಗಿಹೋಯ್ತು ಮಾರಾಯ. ಇದ್ರಲ್ಲಿ ಲೆಕ್ಕಕ್ಕಿಲ್ಲದ ದೊಡ್ಡವರಿಗೇನು ಕೆಲಸ, ಹೂಂ ಗುಟ್ಟುವುದೊಂದೇ ಅಲ್ಲವೇ!' ಎಂದು ಹೆಗಲ ಮೇಲಿನ ಟುವಾಲನ್ನು ತೆಗೆದು ತಲೆಗೆ ಕಟ್ಟಿಕೊಳ್ಳುತ್ತ 'ತೋಟಕ್ಕೆ ಹೋಗಿ ಬರ್ತೇನೆ, ಆಸ್ರಿ ಕುಡಿದು ಹೋಗು ನಾಗರಾಜ' ಎಂದು ಹೇಳಿ ಪರಿಸ್ಥಿತಿ ನಿಭಾಯಿಸುವ ಜವಾಬ್ದಾರಿಯನ್ನು ಹೆಂಡತಿಯ ಹೆಗಲಿಗೊರೆಸಿ ಶಂಕ್ರಣ್ಣ ಹೊರಟ.

ಇಷ್ಟೆಲ್ಲ ರಾದ್ಧಾಂತ ಆದಮೇಲೂ ರಾಧಾಳನ್ನು ನಮ್ಮ ಕುಟುಂಬದ ಶೇಖರನಿಗೇ ಕೊಡುವುದು ಎಷ್ಟು ಸರಿ. ಒಬ್ಬರನ್ನೊಬ್ಬರು ಮುಂದೆ ಭೇಟಿ ಆದರೆ ಇರಿಸುಮುರುಸಲ್ಲವೇ? ಗಜಾನನನಿಗೂ ತಲೆಬೇಡವೇ!! ಗಿರಿಜತ್ತಿಗೆ ಮಂಕಾಗಿ ನಾಗರಾಜನಿಗೆ ಆಸ್ರಿಗೆ ಕೊಟ್ಟು ಕಳುಹಿಸಿದಳು.

ವೇಣುವಿನ ಜೊತೆ ಗಿರಿಜತ್ತಿಗೆಯೂ ರಾಧಾಳನ್ನು ಮರೆಯಲು ಬಹಳ ಪ್ರಯತ್ನ ಪಟ್ಟಳು. ತನ್ನ ಮಗನ ರೂಪ, ವಿದ್ಯೆ, ನೌಕರಿ ಎದುರು ರಾಧಾಳಿಗಿಂತ ಚೆಂದದ ಹೆಣ್ಣನ್ನು ಸೊಸೆಯಾಗಿ ಮನೆ ತುಂಬಿಸಿಕೊಳ್ಳುವ ಯೋಜನೆ ರೂಪಿಸಿಕೊಂಡಳು. ರಾಧಾಳ ಮುಂದೆ ತನ್ನ ಸೊಸೆಯನ್ನು ಸಿಂಗರಿಸಿ ಮೆರೆಸುವ ಕನಸು ಕಂಡಳು. ಏನೇ ಹೇಳಿ ಹಳೆಯದನ್ನು ಮರೆತೇನೆಂದರೂ ಅಷ್ಟು ಸುಲಭವಾಗಿ ಮರೆಯಲಾದೀತೇ, ಅರಳು ಮರಳಿನ ಪ್ರಾಯವೂ ಅಲ್ಲ ಪಾಪ ಗಿರಿಜತ್ತಿಗೆಗೆ.

**'ಅತ್ತೆ, ಅಳಬೇಕಿದ್ದ ನಾನೇ ನಗುತ್ತಿದ್ದೇನೆ, ಚೆಂದದ ಬದುಕು ನನ್ನನ್ನು ಕಾಯುತ್ತಿದೆ ಎಂದು ತಿಳಿದ ಮೇಲೆ ಹಳೆಯದನ್ನೆಲ್ಲ ಕೆದಕಿದರೆ ನನಗ್ಯಾವ ನಿಧಿ ದೊರಕೀತು? ನಿನ್ನ ಸೊಸೆಯಾಗಿ ಹುಟ್ಟಿದವಳು ವೇಣುವಿಗೆ ವಧುವಾಗಿ ಬರುವುದು ಬಹಳ ದೂರವಿಲ್ಲ ಬಿಡು. ನಾವೇ ಅವನನ್ನು ತಪ್ಪು ತಿಳಿದಿದ್ದೆವು...' ಕಣ್ಣಹನಿಯೊಂದು ರಾಧಾಳ ಬಟ್ಟಲು ಕಂಗಳಿಂದ ಇಳಿದು ತೆಳ್ಳಗೆ ಹಚ್ಚಿದ ಕಾಡಿಗೆಯನ್ನು ತೆವಡುವುದರಲ್ಲಿತ್ತು.**

ಮದುವೆಗೆ ಹೊರಡಲು ಚೆಂದಕ್ಕೆ ತಯಾರಾದ ಗಿರಿಜತ್ತಿಗೆಯನ್ನು ಕರೆದುಕೊಂಡು ಬಿಳಿಯ ಪರ್ಕಾಳಿ ಉಟ್ಟ ಶಂಕ್ರಣ್ಣ ಎದುರ್ಗೊಳ್ಳುವ ಕಾರ್ಯಕ್ರಮ ಮುಗಿದಿರಬೇಕು ಎಂದು ಅಂದಾಜಿಸುತ್ತ ಕಾಡ್ಮನೆ ಮದುವೆಗೆ ಅಂತೂ ಹೊರಟ. ರಾಧಾಳ ಮದುವೆಗೆ ಮಂಕಾಗಿದ್ದು ಬಹುಶಃ ಇವರಿಬ್ಬರೇ ಇರಬೇಕು. ಮಿಕ್ಕವರೆಲ್ಲ ಖುಷಿಯಿಂದಲೇ ಮದುವೆ ತಯಾರಿಯಲ್ಲಿ ಓಡಾಡಿಕೊಂಡಿದ್ದರು. ವೇಣುವಿಗೆ ರಾಧನ ಮದುವೆಯ ವಿಷಯ ತಿಳಿಸಿದಾಗ ಬುಡ ಅಲ್ಲಾಡಿದವರಂತೆ ಸ್ತಬ್ಧನಾಗಿ ದನಿಯನ್ನು ನಡುಗಿಸಿ 'ಆಯ್ತು' ಎಂದು ಹೇಳಿ ಫೋನಿಟ್ಟುಬಿಟ್ಟಿದ್ದ.